# ಗೆಜ್ಜೆನಾದ

■ ಶ್ವೇತಾ ನರಗುಂದ
ಕಲೆ: ದರ್ಶನ್ ವಿ.



ಕನ್ನಡ ಸಾಹಿತ್ಯದ ಅಭಿಮಾನಿಯಾದ ಗುರುರಾಜನನ್ನು, ಆತನನ್ನು ಬಲ್ಲವರು ಕರೆಯುವುದು 'ಪುಸ್ತಕದ ಹುಳು' ಎಂದೇ. ಕಾದಂಬರಿಗಳಲ್ಲಿ ಆತನಿಗೆ ಹೆಚ್ಚಿನ ಅಭಿರುಚಿ. ಬ್ಯಾಂಕಿನ ತನ್ನ ಉದ್ಯೋಗದ ಸಮಯವನ್ನುಳಿದು ಆತ ಹೆಚ್ಚಿನ ಸಮಯ ಕಳೆಯುವುದು ಕಾದಂಬರಿಗಳ ಜೊತೆಯಲ್ಲಿಯೇ. ಕಾದಂಬರಿಯೊಂದು ಕೈಯಲ್ಲಿದ್ದರೆ, ಊಟ ತಿಂಡಿಯ ಪರಿವೆಯೂ ಇರುವುದಿಲ್ಲ. ಕಥೆ ರುಚಿಸಿದರಂತೂ ರಾತ್ರಿಯೆಲ್ಲ ನಿದ್ದೆಗೆಟ್ಟು ಕೊನೆಯ ಪುಟ ತಿರುವಿಯೇ ಪುಸ್ತಕ ಕೆಳಗಿಡುವಷ್ಟು ಹುಚ್ಚು. ಪ್ರೇಮಕಥೆಗಳಾದರಂತೂ ಹೆಚ್ಚಿನ ಆಸಕ್ತಿ. ವಯೋಸಹಜ. ಕೇಂದ್ರ ಗ್ರಂಥಾಲಯದಿಂದ ಒಳ್ಳೊಳ್ಳೆಯ ಪುಸ್ತಕ ಎರವಲು ಪಡೆಯುವುದಲ್ಲದೆ, ಸಮಾನ ಅಭಿರುಚಿಯ ಗೆಳೆಯರಿಂದ ಕೈಗಡ ಪಡೆಯುವುದು, ಆಗಾಗ ಪುಸ್ತಕ ಮಳಿಗೆಗಳಿಗೆ ಭೇಟ್ಟಿ ಕೊಟ್ಟು ಹೊಸ ಬಿಡುಗಡೆಗಳನ್ನು ಖರೀದಿಸಿ ತರುವುದು ಎಲ್ಲವೂ ಇದ್ದದ್ದೇ. ಆತನ ಬ್ರಹ್ಮಚಾರಿ ವನ್ ಬಿಎಚ್‌ಕೆ ಫ್ಲ್ಯಾಟಿನಲ್ಲಿ ಎಲ್ಲಿ ನೋಡಿದರಲ್ಲಿ ಪುಸ್ತಕಗಳೇ. ಆತನದೇ ಬ್ಲಾಕಿನ ಎಂಟನೇ ಮಹಡಿಯ, ಕನ್ನಡ ವಿಶ್ವವಿದ್ಯಾಲಯದ ಪ್ರೊಫೆಸರ್ ಕೊಂಡಾಜೆಯವರು ಗುರುರಾಜನ ಆಪ್ತರಲ್ಲೊಬ್ಬರು. ಪ್ರೊ. ಕೊಂಡಾಜೆಯವರಿಗೂ ಸಾಹಿತ್ಯಪ್ರಿಯ ಗುರುರಾಜನೆಂದರೆ ವಿಶೇಷ ಸ್ನೇಹ, ಆತ ಅವರಿಗಿಂತ ವಯಸ್ಸಿನಲ್ಲಿ ಕಿರಿಯನಾಗಿದ್ದರೂ ಕೂಡ. ಉತ್ತಮ ಕೃತಿಯೊಂದು ಕೊಂಡಾಜೆಯವರ ಗಮನಕ್ಕೆ ಬಂದಾಗ, ಅದನ್ನು ಗುರುರಾಜನ ಗಮನಕ್ಕೆ ತರುವುದು ಅಥವಾ ಒದಗಿಸಿಕೊಡುವುದು, ನಂತರ ಕೃತಿಯ ಬಗ್ಗೆ ಚರ್ಚಿಸುವುದನ್ನು ಅವರು ಪ್ರೀತಿಯಿಂದಲೇ ಮಾಡುತ್ತಾರೆ. ಹೊಸ ವಿಚಾರಧಾರೆಗಳಿಗೆ ಕೊಂಡಾಜೆಯವರದು ಯಾವಾಗಲೂ ತೆರೆದ ಮನಸ್ಸು.